ಔರಾದ್ ಪಟ್ಟಣ ಪಂಚಾಯ್ತಿಗೆ ಹಣಕಾಸು ಒದಗಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 105(463)

ಸದಸ್ಯರ ಹೆಸರು ಶ್ರೀ ಗುಂಡಪ್ಪ ವಕೀಲ್(ಔರಾದ್)

ಉತ್ತರಿಸುವ ಸಚಿವರು ಶ್ರೀ ಎಂ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು)

ಪ್ರಶ್ನೆ

ಅ) ಬೀದರ್ ಜಿಲ್ಲೆ ಔರಾದ್ ಪಟ್ಟಣ ಪಂಚಾಯಿತಿಗೆ 2001-02ರಲ್ಲಿ ಸರ್ಕಾರದಿಂದ ಬಿಡುಗಡೆಯಾದ ಹಣವೆಷ್ಟು?

ಆ) ಈ ಮೊತ್ತದಲ್ಲಿ ಈ ಪಂಚಾಯಿತಿ ವ್ಯಾಪ್ತಿಯಲ್ಲಿ ಇದುವರೆವಿಗೆ ಕೈಗೊಂಡಿರುವ ಕಾಮಗಾರಿಗಳ ವಿವರ ಖರ್ಚು ಮಾಡಿರುವ ಹಣದ ವಿವರದ ಪೂರ್ಣ ಮಾಹಿತಿ ಒದಗಿಸುವುದು?

ಇ) ಕಳೆದ 2000-2001 ಹಾಗೂ 2001-2002ನೇ ಸಾಲಿನಲ್ಲಿ ಸರ್ಕಾರ ಈ ಪಟ್ಟಣ ಪಂಚಾಯಿತಿಗ ಸಕಾಲದಲ್ಲಿ ಹಣ ಬಿಡುಗಡೆ ಮಾಡದಿರುವುದರಿಂದ ನಗರ ನೈರ್ಮಲ್ಯ ಸ್ವಚ್ಛತೆ ಹಾಗೂ ಕುಡಿಯುವ ನೀರಿನ ಅಭಾವ ಉಂಟಾಗಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ? ಇದಕ್ಕೆ ಕಾರಣವೇನು?

ಈ) ಈ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಉತ್ತರ

ಅ) 2001-2002ನೇ ಸಾಲಿನ ಆರ್ಥಿಕ ವರ್ಷದಲ್ಲಿ ರಾಜ್ಯ ಹಣಕಾಸು ಆಯೋಗದ ಅನುದಾನದಿಂದ ಔರಾದ್ ಪಟ್ಟಣ ಪಂಚಾಯಿತಿಗೆ ನೌಕರರ ವೇತನಕ್ಕಾಗಿ (ಡಿಸೆಂಬರ್-2001ರವರೆಗೆ) ರೂ 21,64,500-00ಗಳನ್ನು ಬಿಡುಗಡೆ ಮಾಡಲಾಗಿದೆ

ಆ ಇ ಮತ್ತು ಈ) ಸರ್ಕಾರದಿಂದ ಅಭಿವೃದ್ಧಿ ಅನುದಾನವಾಗಿ ಯಾವುದೇ ಹಣ ಬಿಡುಗಡೆಯಾಗಿಲ್ಲ ಆದಾಗ್ಯೂ 2001-2002ನೇ ಸಾಲಿನಲ್ಲಿ ನೈಸರ್ಗಿಕ ನಿಧಿಯಿಂದ ನೀರಿನ ಅಭಾವ ನೀಗಿಸಲು ರೂ 8 75 ಲಕ್ಷ ಹಾಗೂ 2001-02ನೇ ಸಾಲಿಗೆ ರೂ 5 76 ಲಕ್ಷ ಬಿಡುಗಡೆ ಮಾಡಲಾಗಿದೆ ಅಲ್ಲದೆ 2001-2002ನೇ ಸಾಲಿನಲ್ಲಿ ಹುಡ್ಕೋ ಸಾಲದಿಂದ ರೂ 25 00 ಲಕ್ಷ ಅಂದಾಜಿನ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ